**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**PC. 357/2025**

CW-3

**ಕಲಂ. 223 ಬಿ.ಎನ್.ಎಸ್.ಎಸ್ ಅಡಿಯಲ್ಲಿ ಪಿರ್ಯಾದಿಯ ಸ್ವ ಇಚ್ಛಾ ಹೇಳಿಕೆಃ**

| | |
|---|---|
| ಹೆಸರು | ಮಹಾದೇವ ಚಾಂಬರ |
| ತಂದೆಯ /ಗಂಡನ ಹೆಸರು | ಪಾಂಡಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಬೆಳಗಲಿ |

**ದಿನಾಂಕ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನನಗೆ ಪಿರ್ಯಾದಿ ಮತ್ತು ಆರೋಪಿತರ ಪರಿಚಯ ಇರುತ್ತದೆ. ದಿಃ 15-09-2025 ರಂದು ಪಿರ್ಯಾದಿದಾರಳ ಕಡೆಯಿಂದ ಆರೋಪಿತರ ವಿರುದ್ದ ದೂರನ್ನು ಕೊಡಿಸಲಾಗಿತ್ತು. ದಿಃ 16-09-2025 ರಂದು ಮಹಾಲಿಂಗಪುರ ಪಿಎಸ್ಐ ರವರು ನಮ್ಮನ್ನು ಠಾಣೆಗೆ ಕರೆಸಿಯಿಸಿದ್ದರು. ಆಗ ಠಾಣೆಯಲ್ಲಿ ಪಿರ್ಯಾದಿದಾರಳ ಮತ್ತು ಆರೋಪಿತರ ಮಧ್ಯೆ ರಾಜಿ ಮಾಡಿಸಲಾಗಿತ್ತು. ನಂತರ ಮಹಾಲಿಂಗಪುರ ಬಸ್ ನಿಲ್ದಾಣಕ್ಕೆ ನಾವು ಮತ್ತು ಆರೋಪಿತರು ಚಾ ಕುಡಿಯಲು ಬಂದಾಗ , 1 ನೇ ಆರೋಪಿತನು ಪಿರ್ಯಾದಿದಾರಳಿಗೆ ಖಾಲಿ ಬಾಂಡಿನಲ್ಲಿ ಸಹಿ ಮಾಡಿ ವಿಚ್ಛೇದನೆ ಕೊಡಿಸು ಅಂತ ಪಿರ್ಯಾದಿದಾರಳಿಗೆ ಹೊಡಬಡಿ ಮಾಡಿರುತ್ತಾನೆ. ಆರೋಪಿ ನಂ. 1 ನೇ ರಿಂದ 5 ನೇ ಆರೋಪಿತರು ಪಿರ್ಯಾದಿದಾರಳಿಗೆ ಹೊಡೆದಿರುತ್ತಾರೆ. ನಂತರ ನಾನು ಮತ್ತು ಶಂಕರ ದೇವಮಾನೆ ರವರು ಪಿರ್ಯಾದಿದಾರಳನ್ನು ಬಿಡಿಸಿಕೊಂಡೆವು. ನಂತರ ನಾವು ಸದರಿಯವರ ದೂರನ್ನು ನೀಡಲು ಹೋದಾಗ ಪೊಲೀಸರು ದೂರನ್ನು ಸ್ವೀಕರಿಸಿರುವುದಿಲ್ಲ. ದಿಃ 20-09-2025 ರಂದು ಮಹಾಲಿಂಗಪುರ ಪಿಎಸ್ಐ ಮತ್ತು ಸಿಪಿಐ ರವರಿಗೆ ಪಿರ್ಯಾದಿಯನ್ನು ಪೋಸ್ಟ ಮುಖಾಂತರ ನೀಡಿರುತ್ತೇನೆ. ನಾನು ಆರೋಪಿತರ ವಿರುದ್ದ ಕಾನೂನು ಕ್ರಮ ಜರುಗಿಸಬೇಕೆಂದು ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**PC. 357/2025**

CW-2

**ಕಲಂ. 223 ಬಿ.ಎನ್.ಎಸ್.ಎಸ್ ಅಡಿಯಲ್ಲಿ ಪಿರ್ಯಾದಿಯ ಸ್ವ ಇಚ್ಛಾ ಹೇಳಿಕೆಃ**

| | |
|---|---|
| ಹೆಸರು | ಶಂಕರ ದೇವಮಾನೆ |
| ತಂದೆಯ /ಗಂಡನ ಹೆಸರು | ಗೋಪಾಲ |
| ವಯಸ್ಸು | 45 ವರ್ಷ |
| ಉದ್ಯೋಗ | ಮೆಸ್ತ್ರಿ ಕೆಲಸ |
| ವಾಸಸ್ಥಳ | ಆಸಂಗಿ |

**ದಿನಾಂಕ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನನಗೆ ಪಿರ್ಯಾದಿ ಮತ್ತು ಆರೋಪಿತರ ಪರಿಚಯ ಇರುತ್ತದೆ. ದಿಃ 15-09-2025 ರಂದು ಪಿರ್ಯಾದಿದಾರಳ ಕಡೆಯಿಂದ ಆರೋಪಿತರ ವಿರುದ್ದ ದೂರನ್ನು ಕೊಡಿಸಲಾಗಿತ್ತು. ದಿಃ 16-09-2025 ರಂದು ಮಹಾಲಿಂಗಪುರ ಪಿಎಸ್ಐ ರವರು ನಮ್ಮನ್ನು ಠಾಣೆಗೆ ಕರೆಸಿಯಿಸಿದ್ದರು. ಆಗ ಠಾಣೆಯಲ್ಲಿ ಪಿರ್ಯಾದಿದಾರಳ ಮತ್ತು ಆರೋಪಿತರ ಮಧ್ಯೆ ರಾಜಿ ಮಾಡಿಸಲಾಗಿತ್ತು. ನಂತರ ಮಹಾಲಿಂಗಪುರ ಬಸ್ ನಿಲ್ದಾಣಕ್ಕೆ ನಾವು ಮತ್ತು ಆರೋಪಿತರು ಚಾ ಕುಡಿಯಲು ಬಂದಾಗ , 1 ನೇ ಆರೋಪಿತನು ಪಿರ್ಯಾದಿದಾರಳಿಗೆ ಖಾಲಿ ಬಾಂಡಿನಲ್ಲಿ ಸಹಿ ಮಾಡಿ ವಿಚ್ಛೇದನೆ ಕೊಡಿಸು ಅಂತ ಪಿರ್ಯಾದಿದಾರಳಿಗೆ ಹೊಡಬಡಿ ಮಾಡಿರುತ್ತಾನೆ. ಆರೋಪಿ ನಂ. 1 ನೇ ರಿಂದ 5 ನೇ ಆರೋಪಿತರು ಪಿರ್ಯಾದಿದಾರಳಿಗೆ ಹೊಡೆದಿರುತ್ತಾರೆ. ನಂತರ ನಾನು ಮತ್ತು ಮಹಾದೇವ ಚಾಂಬರ ರವರು ಪಿರ್ಯಾದಿದಾರಳನ್ನು ಬಿಡಿಸಿಕೊಂಡೆವು. ನಂತರ ನಾವು ಸದರಿಯವರ ದೂರನ್ನು ನೀಡಲು ಹೋದಾಗ ಪೊಲೀಸರು ದೂರನ್ನು ಸ್ವೀಕರಿಸಿರುವುದಿಲ್ಲ. ದಿಃ 20-09-2025 ರಂದು ಮಹಾಲಿಂಗಪುರ ಪಿಎಸ್ಐ ಮತ್ತು ಸಿಪಿಐ ರವರಿಗೆ ಪಿರ್ಯಾದಿಯನ್ನು ಪೋಸ್ಟ ಮುಖಾಂತರ ನೀಡಿರುತ್ತೇನೆ. ನಾನು ಆರೋಪಿತರ ವಿರುದ್ದ ಕಾನೂನು ಕ್ರಮ ಜರುಗಿಸಬೇಕೆಂದು ನ್ಯಾಯಾಲಯಕ್ಕೆ ವಿನಂತಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**PC. 357/2025**

CW-1

**ಕಲಂ. 223 ಬಿ.ಎನ್.ಎಸ್.ಎಸ್ ಅಡಿಯಲ್ಲಿ ಫಿರ್ಯಾದಿಯ ಸ್ವ ಇಚ್ಛಾ ಹೇಳಿಕೆಃ**

| | |
|---|---|
| ಹೆಸರು | ರೂಹಿ ದೇವಮಾನೆ |
| ತಂದೆಯ /ಗಂಡನ ಹೆಸರು | ಪವನಕುಮಾರ |
| ವಯಸ್ಸು | 24 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಆಸಂಗಿ |

**ದಿನಾಂಕ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪವನಕುಮಾರ ರವರು ನನ್ನ ಗಂಡನಾಗಬೇಕು. ಸದಾಶಿವರವರು ನನಗೆ ಮಾವನಾಗಬೇಕು. ಶೋಭಾ ಎಂಬುವವರು ನನಗೆ ಅತ್ತೆ ಆಗಬೇಕು. ಸ್ವಾತಿ ರವರು ನನ್ನ ಗಂಡನ ಅಕ್ಕ. ನೇಹಾರವರು ಸಹ ನನ್ನ ಗಂಡನ ಅಕ್ಕ ಆಗಬೇಕು. ನಮ್ಮ ಮದುವೆ ದಿಃ 27-04-2018 ರಂದು ಆಗಿರುತ್ತದೆ. ನಮ್ಮ ಮದುವೆಯು ಬ ಿಳಗಲಿಯ ನನ್ನ ಸಹೋದರ ಮಾವನ ತೋಟದಲ್ಲಿ ಆಗಿರುತ್ತದೆ. 1 ಮತ್ತು 2 ನೇ ಆರೋಪಿತರು ಬಸ್ತವಾಡದಲ್ಲಿ ಇರುತ್ತಾರೆ. ಸದರಿಯವರು ಖುದ್ದು ಊರು ಬೆಕ್ಕೇರಿ . ನನ್ನ ಮದುವೆಯ ಸುಮಾರು 6 ವರ್ಷಗಳ ಹಿಂದೆ ಆಗಿರುತ್ತದೆ. ನಾನು ಮತ್ತು 1 ನೇ ಆರೋಪಿಯು ಸುಮಾರು 3 ವರ್ಷಗಳ ಕಾಲ ಚೆನ್ನಾಗಿ ಬಾಳ್ವೆ ಮಾಡಿರುತ್ತೇವೆ. ಸದರಿ 3 ವರ್ಷಗಳ ಅವಧಿಯಲ್ಲಿ ನಮಗೆ ಒಂದು ಗಂಡು ಮಗು ಆಗಿರುತ್ತದೆ. ನನ್ನ ಮಗನ ಹೆಸರು ವಿರಾಜ್ ಆಗಿರುತ್ತದೆ. 1 ನೇ ಆರೋಪಿಯು ಒಂದು ಹುಡುಗಿಯ ಜೊತೆ ಅಕ್ರಮವಾಗಿ ಸಂಬಂಧ ಬೆಳೆಸಿದ್ದನು. ಸದರಿ ಅಕ್ರಮ ಸಂಬಂಧವನ್ನು ನಾನು ವಿರೋಧಿಸಿದಾಗ ದಿಃ 08-03-2020 ರಂದು ರಾತ್ರಿ 12 ಗಂಟೆಗೆ ಎಲ್ಲಾ ಆರೋಪಿತರು ನನಗೆ ನನ್ನ ಗಂಡ ಮನೆಯಿಂದ ಹೊರಗೆ ಹಾಕಿರುತ್ತಾರೆ. 1 ನೇ ಆರೋಪಿಯು ಬಸ್ತವಾಡಿಯಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದನು. ನಾನು 1 ನೇ ಆರೋಪಿಯ ಜೊತೆಗೆ ಬಸ್ತವಾಡಿನಲ್ಲಿರುವ ಕ್ವಾಟರ್ಸನಲ್ಲಿ ಇದ್ದೆನು. ನಂತರ ನಾನು ಮಹಾಲಿಂಗಪುರ ಪೊಲೀಸ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ದಿಃ 15-09-2025 ರಂದು ನಾನು ದೂರನ್ನು ನೀಡಿದ್ದೆನು. ನಂತರ ದಿಃ 16-09-2025 ರಂದು ಪೊಲೀಸ ಠಾಣೆಗೆ ಹೋಗಿದ್ದೆನು. ಆಗ 1 ನೇ ಆರೋಪಿಯು ನನಗೆ ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ತಿಳಿಸಿದ್ದರಿಂದ ರಾಜಿ ಆಗಿರುತ್ತದೆ. ನಂತರ 1 ನೇ ಆರೋಪಿಯು ಮಹಾಲಿಂಗಪುರ ಬಸ್ ನಿಲ್ದಾಣದಲ್ಲಿ ನನಗೆ ದೂರನ್ನು ಯಾಕೆ ನೀಡಿರುತ್ತೀಯಾ ಅಂತ ಹೇಳಿ ನನಗೆ ಹೊಡೆದಿರುತ್ತಾರೆ. ನಂತರ 1 ನೇ ಆರೋಪಿಯು ನನಗೆ ಒಂದು ಖಾಲಿ ಬಾಂಡಿನ ಮೇಲೆ ಸಹಿ ಮಾಡಲು ಹೇಳಿದರು.

2. 1 ನೇ , 2, 3 ಮತ್ತು 5 ನೇ ಆರೋಪಿತರು ನನಗೆ ಹೊಡೆದಿರುತ್ತಾರೆ. ನಂತರ ಮಹಾದೇವ ಚಾಂಬರ ಮತ್ತು ಶಂಕರ ದೇವಮಾನೆ ರವರು ನನ್ನನ್ನು ಬಿಡಿಸಿಕೊಂಡರು. ನಂತರ ನಾನು ಸದರಿಯವರ ದೂರನ್ನು ನೀಡಲು ಹೋದಾಗ ಪೊಲೀಸರು ದೂರನ್ನು ಸ್ವೀಕರಿಸಿರುವುದಿಲ್ಲ. ಸಾಕ್ಷಿಯು ತಾನು ನೀಡಿದ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು , ಸದರಿ ಪಿರ್ಯಾದಿಯನ್ನು ನಿಸಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಸಿ-1 ಎ ಎಂದು ಗುರುತಿಸಲಾಯಿತು. ನಂತರ ನಾನು ಪಿರ್ಯಾದಿಯನ್ನು ಪೋಸ್ಟ ಮುಖಾಂತರ ಪಿಎಸ್ಐ ಮತ್ತು ಸಿಪಿಐ ರವರಿಗೆ ನೀಡಿರುತ್ತೇನೆ. ನಾನು ಆರೋಪಿತರ ವಿರುದ್ದ ಕಾನೂನು ಕ್ರಮ ಜರುಗಿಸಬೇಕೆಂದು ನ್ಯಾಯಾಲಯಕ್ಕೆ ವಿನಂತಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.